ವಿ. ಗೋವಿಂದಾಚಾರಿ, ಮೈಸೂರು
ಸೂರ್ಯನಿಗೆ ನಮಸ್ಕಾರ ಮಾಡುತ್ತಾರೆ. ಚಂದ್ರನಿಗೇಕೆ ಮಾಡುವುದಿಲ್ಲ?



ಮಾಮನಲ್ಲವೇ! ಸಲಿಗೆಯಿದ್ದೆಡೆ ನಮಸ್ಕಾರ ಇರುವುದಿಲ್ಲ.

ಕೆ.ಎಸ್. ಚಂದ್ರಶೇಖರ್, ಮೈಸೂರು
ಆಸೆಗೂ, ಅಪೇಕ್ಷೆಗೂ ಇರುವ ವ್ಯತ್ಯಾಸವೇನು?
ಮರ್ಸಿಡಿಸ್ ಬೇಕೆಂಬುದು ಆಸೆ; ಮಾವ ಕೊಡಿಸಲೆಂಬುದು ಅಪೇಕ್ಷೆ.

ಮಲ್ಲಿಕಾರ್ಜುನ, ಸುರಧೇನುಪುರ
ಮಾರ್ಚ್ 20 ಗುಬ್ಬಚ್ಚಿಗಳ ದಿನಾಚರಣೆಯಂತೆ. ಅವುಗಳಿಗೆ ಶುಭಾಶಯ ಹೇಳಿದಿರಾ?
ಹೇಳಿದೆ. ಮಾತಿನಲ್ಲಿ ಹೇಳಿದರೆ ಸಾಲದು, ಕೃತಿಯಲ್ಲಿ ಆಚರಿಸಿ ಎಂದು ಗದರಿತು.

ಪಿ. ಜಯವಂತ ಪೈ, ಕುಂದಾಪುರ
ಹೆಣ್ಣು ಬ್ಯೂಟಿಪಾರ್ಲರ್‌ಗೆ ಹೋಗುವುದಕ್ಕೂ, ಗಂಡು ಬಾರ್‌ಗೆ ಹೋಗುವುದಕ್ಕೂ ವ್ಯತ್ಯಾಸವೇನು?



ಹೊರಬಂದಾಗ ಅವಳು ಬ್ರೈಟ್ ಆಗಿರುತ್ತಾಳೆ, ಇವನು ಟೈಟ್ ಆಗಿರುತ್ತಾನೆ.

ವೈ.ವಿ. ಪ್ರಭಾಕರ, ಬೆಂಗಳೂರು
ನಮ್ಮ ಪ್ರಶ್ನೆಗಳಿಗೆ ಇಲ್ಲಿ ಉತ್ತರಿಸುತ್ತಾ ಕುಳಿತರೆ ಮನೆಗೆಲಸ ಯಾವಾಗ ಮಾಡ್ತೀರಿ ರಾಮ್?
ಒಂದ್ಸಲ್ವಾನೂ ನೆಟ್ಟಗ್ಮಾಡಲ್ಲ. ಗೆಟೌಟ್ ಎಂದು ಯಜಮಾನರೇ ಅಟ್ಟಿರುವುದರಿಂದ ನಾನು ಫ್ರೀ.

ನಿರುಕ್ತಾ, ಬೆಂಗಳೂರು
ಸಕ್ಕರೆ ಕಾಯಿಲೆ, ಉಪ್ಪಿನ ಕಾಯಿಲೆ (ಬಿ.ಪಿ.) ಬಂದಾಯಿತು. ಕಹಿ, ಹುಳಿ ಕಾಯಿಲೆಗಳು ಬರಲಿವೆಯಾ?
ಹುಳಿತೇಗು ಇದೆಯಲ್ಲ; ಇವೆಲ್ಲದರ ಚಿಕಿತ್ಸೆಯ ಬಿಲ್ ಕಂಡಾಗ ಕಹಿರೋಗ ಸಹಜವಾಗಿಯೇ ಅಡರುತ್ತೆ.

ಮಂಡಿ ಕುಮಾರ್, ಬೆಂಗಳೂರು
ನಾವು ದೇವರನ್ನು ಪ್ರತ್ಯಕ್ಷವಾಗಿ ಕಂಡಿಲ್ಲ. ಆದರೂ ನಂಬುತ್ತೇವೆ. ಏಕೆ?
ನಾವು ನಂಬುವವರು ನಂಬುವುದರಿಂದ.

ಗಂಜಾಂ ನಾಗರಾಜ್, ಮೈಸೂರು
ಪ್ರಶ್ನೆ ಕೇಳಿದಮೇಲೆ ಉತ್ತರ ಕೊಡಲೇಬೇಕಾ?
ಊಹೂಂ. ನೆಗೆಟಿವ್ (ರಿ)ಮಾರ್ಕ್ಸ್ ಇದ್ದಾಗ ಉತ್ತರಿಸಿದರೆ ಮತ್ತಷ್ಟು ಪ್ರಮಾದ.

ಎಚ್. ಸಿದ್ಧಾರ್ಥ, ಈದು
ಪ್ರಕೃತಿಯ ಮಡಿಲು, ಮಾನವನ ಒಡಲು; ಹೆಚ್ಚು ಮಲಿನವಾಗಿರುವುದು ಯಾವುದು?
ಅಭಿವೃದ್ಧಿಯ ಹೆಸರಲ್ಲಿ ಅವನಿಯ ಆಪೋಶನಗೈಯುತ್ತಿರುವ ಮಾನವನ ಮೆದುಳು.

ರತ್ನಜ, ಮೈಸೂರು
ಯಾವಾಗಲೂ ಪುರುಷರೇ ಮುಂದುವರೆಯುತ್ತಾರಲ್ಲ, ಏಕೆ ಗುರು?
ನಿಮ್ಮ ಮಾತನ್ನು ಕೇಳಿ ಸೋನಿಯಾಗಾಂಧಿ ಪಕಪಕನೆ ನಗುತ್ತಿರುವರಂತೆ.

ಎಚ್.ಕೆ. ವಿಜಯಕುಮಾರ್, ರಾಯಚೂರು
ಈಗಿನ ಚಲನಚಿತ್ರಗಳು ತೆರೆಕಾಣುವುದಕ್ಕೆ ಮುಂಚೆ ಅಬ್ಬರಿಸಿ ತೆರೆ ಕಂಡನಂತರ ಏಕೆ ಶತದಿನೋತ್ಸವ ಪೂರೈಸುತ್ತಿಲ್ಲ?
ಬಲೂನಿನ ಗುಣ; ವಿಮರ್ಶೆಯ ಮೊದಲ ಚುಚ್ಚಿಗೇ ಸತ್ವವೆಲ್ಲಾ ಔಟ್!

ಸುರೇಶ್ ಬಿ.ವಿ. ಬೆಂಗಳೂರು
ವಿಧಾನಸೌಧದ ಮುಂದೆ ಘೂಗಳ್ಳರು, ಮರಗಳ್ಳರು, ಮೈಗಳ್ಳರು ಇದ್ದಾರೆ ಎಚ್ಚರಿಕೆ ಎಂದು ಬೋರ್ಡ್ ಹಾಕಬಹುದಲ್ಲವೆ?
...ಅವರೆಲ್ಲರೂ ನಿದ್ರಿಸುವ ಜಾಗ; ಸದ್ದು ಮಾಡಿ ಎಚ್ಚರಿಸಬೇಡಿ ಎಂದು ಹಾಕುವುದು ಸೂಕ್ತ.

ಬಿ.ಆರ್. ಉಷಾ, ಬೆಂಗಳೂರು
ಹರಕೆಗೆ ಮುಡೀನೇ ಕೊಡೋದು ಯಾಕೆ?
ಬಂಡವಾಳ ಹೂಡದೆಯೇ ವರದ ಲಾಭ ಪಡೆಯುವ ಜಾಣತನ.

## ವಾರದ ಪ್ರಶ್ನೆ

ರಾಜೀವ್ ಮಾಗಲ್, ಸಕಲೇಶಪುರ
ಮನೆ ಬಾಗಿಲಿಗೆ ಕಂದಾಯ ದಾಖಲೆ ಎಂದರೆ ಲಂಚವೂ ಮನೆಯ ಬಾಗಿಲಲ್ಲೇನಾ?
ಹಾಗೇನಿಲ್ಲ ಅವರು ಬಾಗಿಲಲ್ಲಿ ಲಂಚವನ್ನು ಸ್ವೀಕರಿಸುವುದಿಲ್ಲ – ವರಾಂಡಕ್ಕೆ ಬರುತ್ತಾರೆ.

ಉಷಾ ರಾಜೇಂದ್ರ
ಅಳಿಯನನ್ನು ಆರಾಧಿಸುವ ಅತ್ತೆ ಸೊಸೆಯನ್ನೇಕೆ ಗೋಳುಹೊಯ್ದುಕೊಳ್ಳುತ್ತಾಳೆ?
ಅವಳ ತಪ್ಪಲ್ಲ; ತನ್ನತ್ತೆ ಅನುಸರಿಸಿದ ಸಿಲಬಸ್ಸನ್ನೇ ಗೃಹಧರ್ಮವೆಂದು ಪಾಲಿಸುತ್ತಾಳೆ.

ವೈದೇಹಿ ಶೇಖರ್, ಮೈಸೂರು
ಮಾದಕವಸ್ತು ಮತ್ತು ಮದ್ಯವ್ಯಸನಿಗಳ ಪುನರ್ವಸತಿ ಕೇಂದ್ರದ ಬಳಿಯೇ ಬಾರ್‌ಗಳಿರುವುದೇಕೆ?
ಪುನರ್ವಸತಿ ಕೇಂದ್ರ ಎಷ್ಟು ಪರಿಣಾಮಕಾರಿಯಾಗಿ ಕಾರ್ಯ ನಡೆಸುತ್ತದೆಂದು ಪರೀಕ್ಷಿಸಲು.

ಶೃತಿ ರಿಗ್ರೆಟ್ ಐಯ್ಯರ್, ಅಮೇರಿಕಾ
ಹೆಂಗಸರೆಲ್ಲಾ ಆಫೀಸಿಗೆ ಹೋಗಿ, ಗಂಡಸರೆಲ್ಲಾ ಮನೆಯಲ್ಲಿ ಇದ್ದರೆ ಪರಿಸ್ಥಿತಿ ಹೇಗಿರುತ್ತೆ?



ವಾರಕ್ಕೊಮ್ಮೆಯಾದರೂ ಹೆಂಗಸರು ಸ್ವಚ್ಛ್ ಗೃಹ್ ಅಭಿಯಾನ್ ಕೈಗೊಳ್ಳಬೇಕಾಗುತ್ತೆ.

ಶ್ರೀವಲ್ಲಭ ಕುಲಕರ್ಣಿ, ಹುಬ್ಬಳ್ಳಿ
ಉಚ್ಚರಿಸುವಾಗ ಇಂಗ್ಲಿಷಿನಲ್ಲಿ ಕೆಲವು ಪದಗಳು ಸೈಲೆಂಟ್ ಆಗೋದಾದ್ರೆ ಬರೆಯಲು ಬಳಸೋದ್ಯಾಕೆ?
ಎಲ್ ಇಲ್ಲದ ಟಾಕಿಂಗ್, ವಾಕಿಂಗ್‌ಗಳು ಟೇಕಿಂಗ್, ವೇಕಿಂಗ್ ಆಗುತ್ತವಲ್ಲ.

ಅನಸೂಯ ಟಿ. ಕೇದಿಗೆಮನೆ
ಮಾಡಿದ ಪಾಪ ಪುಣ್ಯಗಳು ಎಲ್ಲಿ ಸಂಗ್ರಹವಾಗುತ್ತೆ?
ಚಿತ್ರಗುಪ್ತ ಕೋಆಪರೇಟಿವ್ ಬ್ಯಾಂಕಿನ ಫಿಕ್ಸೆಡ್ ಡಿಪಾಸಿಟ್ ಅಕೌಂಟಲ್ಲಿ.

■ **ರಾಮ್**

ಪ್ರಶ್ನೆಗಳನ್ನು editorsu@sudha.co.in ಕಳಿಸಿ